RegaNo BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು— ಅರಮನೆ ಸಿಂಪ್ಕೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

7—2—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ನೆಹರುರಿಗೆ ಗೊತ್ತಿಲ್ಲ

ಪಂ|| ನೆಹರು ಮತ್ತು ಕಾಂಗ್ರೆಸಿಗೆ ಸೋಷಲಿಸಂ ಎಂದರೆ ಏನೆಂಬುದು ತಿಳಿದಿಲ್ಲ ಕೆಲವು ವೇಳೆ ಮನುಷ್ಯನು ಹೆಂಗಸಿನ ನಡತೆ ಹಾಗೂ ಹಿಂದಿನ ವಿಚಾರ ತಿಳಿಯದೆ ಇದ್ದಂತೆ ಅವಳಲ್ಲಿ ಅನುರಕ್ತನಾಗುತ್ತಾನೆ, ಹಾಗೆಯೇ ನೆಹರುರವರ ಪರಿಸ್ಥಿತಿ ಆಗಿದೆ ಸೋಷಲಿಸಂ ಎಂದರೆ ಸರ್ಕಾರಕ್ಕೆ ಹೆಚ್ಚು ಅಧಿಕಾರ ಎಂದು ರಾಜಾಜಿಯವರು ನೆಲ್ಲೂರಿನಲ್ಲಿ ತಿಳಿಸಿದರು

ಕಾಂಗ್ರೆಸಿಗರೆಂದರೆ ಭಯ

ನೆಲ್ಲೂರಿನಲ್ಲಿ ಮೊನ್ನೆ ಸ್ವತಂತ್ರಪಕ್ಷದ ನಾಯಕರಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ಭಾರಿ ಬಹಿರಂಗ ಸಭೆಯಲ್ಲಿ ಭಾಷಣ ಮಾಡುತ್ತಾ, ಹಿಂದೆ ಜನರು ಪೋಲೀಸರಿಗೆ ಹೆದರುತ್ತಿದ್ದರು, ಈಗ ಪೋಲೀಸರು ಮತ್ತು ಅಧಿಕಾರಿಗಳು ಕಾಂಗ್ರೆಸಿಗರಿಗೆ ಹೆದರುವರು ಎಂದರು. ಅವರ ಈ ಮಾತು ಭಾಷಣವನ್ನು ಮುಂದುವರಿಸುತ್ತಾ, ದೇಶದಲ್ಲಿ ಅನೇಕ ಜಾತಿಗಳಿವೆ ಆದರಲ್ಲಿ ಕಾಂಗ್ರೆಸು ಪ್ರಧಾನ ಜಾತಿ ಎಂದರು. ಶ್ರೀ ಬಿ ಗೋಪಾಲರೆಡ್ಡಿಯವರು ಚಿಕ್ಕವರಾಗಿದ್ದಾಗಲೇ ಅವರನ್ನು ನಾನು ಮಂತ್ರಿ ಮಾಡಿದೆ, ಈಗ ಅವರು ಲೈಸನ್ಸು ಪರ್ಮಿಟ್ ರಾಜ್ಯದ ಸದಸ್ಯರು, ಅವರ ಮೇಲೆ ನನಗೆ ವಿಶ್ವಾಸವಿದ್ದಾಗ್ಯೂ ಅವರು ಸೋಲಲೆಂದು ನಾನು ಆಶಿಸುತ್ತೇನೆ ಎಂದರು. ನಾನು ಅರವತ್ತು ವರ್ಷದ ಹಿರಿಯ ಕಾಂಗ್ರೆಸಿಗ ಖಾದಿ ಎಂದರೆ ಆಗ ಗೌರವವಿತ್ತು, ಈಗ ತಿರಸ್ಕಾರವಿದೆ ಎಂದರು.

ದೇಸಾಯರ ನುಡಿ

ಅಂಕೋಲಾದಲ್ಲಿ ಪ್ರಜಾ ಸೋಷಲಿಷ್ಟ ಪಕ್ಷದ ನಾಯಕ ಶ್ರೀ ದಿನಕರ ದೇಸಾಯಿಯವರು ಮಾತನಾಡುತ್ತಾ, ಡಾ|| ಎಂ. ವಿಶ್ವೇಶ್ವರಯ್ಯನವರು ಭದ್ರಾವತಿಯಲ್ಲಿ ಸ್ಥಾಪಿಸಿದಂಥಹ ಕೈಗಾರಿಕೆಗಳನ್ನು ಸ್ಥಾಪಿಸಿ ಮಾಡಬೇಕೆಂದು ತಿಳಿಸಿದರು

ಹಿಂದಿನ ಕಾಲದ್ದು

ಪ್ರಧಾನಿ-ಪಂ|| ನೆಹರು ನಿನ್ನೆ ಬೆಳಿಗ್ಗೆ ಮೈಸೂರಿನಲ್ಲಿ ಚುನಾವಣೆ ಭಾಷಣಮಾಡುತ್ತಾ, 150 ವರ್ಷಗಳಲ್ಲಿ ಸಾಧಿಸಲಾಗದ್ದನ್ನು ಕಾಂಗ್ರೆಸು 15 ವರ್ಷಗಳಲ್ಲಿ ಸಾಧಿಸಿದೆ ಎಂದರು ಸ್ವತಂತ್ರ ಪಕ್ಷದ ಚುನಾವಣೆ ಪ್ರಣಾಳಿಕೆ ಹಿಂದಿನ ಕಾಲದ್ದೆಂದರು

ಉತ್ತಮ ಸ್ಥಿತಿ

ಭಾರತ ಅಧ್ಯಕ್ಷ ಡಾ|| ಪ್ರಸಾದರ ಸಾಮಾನ್ಯ ಸ್ಥಿತಿ ಉತ್ತಮವಾಗಿದೆ

ಆಶ್ಚರ್ಯ

ನೇಪಾಳ ದೊರೆ ಮಹೇಂದ್ರರು ಪ್ರಧಾನಿ ನೆಹರು ಭೇಟಿ ಯೋಜನೆ ಹೊಂದಿಲ್ಲವೆಂದು ತಿಳಿಸಿರುವದು ನವ ದೆಹಲೀಲಿ ಆಶ್ಚರ್ಯವನ್ನುಂಟು ಮಾಡಿದೆ

ನಿಶೇಧಾಜ್ಞೆ

ವಿದ್ಯಾರ್ಥಿಗಳ ವಿಷ್ಯದ ಕಾರಣ ಈ ದಿನದಿಂದ ತಿರುಪತಿಯಲ್ಲಿ ಮುಂದೆ 15 ದಿನಗಳು 144 ನೇ ವಿಧಿ ಪುನಃ ಜಾರಿ ಬಂದಿದೆ

ಹೊಡೆದಾಟ

ಗೋರಕಪುರದಿಂದ ಬಂದಿಂ ವರದಿಯಂತೆ, ಡಿಯೊರಿಯಾ ಜಿಲ್ಲೆಯ ಬಾಡ ಜಬಲಾರ ಪಟ್ಟಣದ ಚುನಾವಣೆ ಸಭೆಯಲ್ಲಿ ವಿರೋಧ ಪಕ್ಷಗಳಲ್ಲಿ ಹೊಡೆದಾಟವಾಗಿ ಸ್ವತಂತ್ರ ಪಕ್ಷದ ಲೋಕಸಭೆ ಉಮೇದುವಾರ ಶ್ರೀ ಬದ್ರಿನಾಥ ಮಿತ್ರರವರು ಸೇರಿ 120 ಜನ ಗಾಯಗೊಂಡರು

★

ಆಕ್ರಮಣವನ್ನು ಚೀನಾ ತ್ಯಜಿಸದಿದ್ದರೆ ಗೋವಾದಲ್ಲಿ ಮಾಡಿದ ಕಾರ್ಯಾಚರಣೆಯನ್ನು ಮಾಡಲು ಭಾರತ ಹಿಂಜರಿಯುವದಿಲ್ಲ ಎಂದು ಕೇಂದ್ರ ಗೃಹಮಂತ್ರಿ ಶ್ರೀ ಲಾಲ್ ಬಹದ್ದೂರ ಶಾಸ್ತ್ರಿರವರು ಭೂಪಾಲಿನಲ್ಲಿ ನುಡಿದರು

ಮಹಾಯಾಗ

ನವಯಾಶಾಣಂನಲ್ಲಿ ಸವಗ್ರಹ ಮಹಾಯಜ್ಞದ ಅಂಗವಾಗಿ ಮೊನ್ನೆ ನಡೆದ ಕುಂಭಾಭಿಷೇಕವನ್ನು 30 ಸಾವಿರ ಭಕ್ತರುಗಳ ವೀಕ್ಷಿಸಿದರು. ಕುಂಭಾಭಿಷೇಕವಾದಸಂತರ ಭಕ್ತರ ಪವಿತ್ರ ಸ್ನಾನ ಮಾಡಿದರು ಮಹಾಯಾಗವು ಶ್ರೀ ಶೃಂಗೇರಿಸ್ವಾಮಿಗಳವರ ನೇತೃತ್ವದಲ್ಲಿ ವಿಧಿವತ್ತಾಗಿ ನೆರವೇರುವುದು.

ಬಹಿರಂಗ ಸಭೆ

ಸ್ವತಂತ್ರ ಪಕ್ಷದ ಆಶ್ರಯದಲ್ಲಿ ನಾಳೆ ಸಂಜೆ 6 ಪರೆ ಗಂಟೆಗೆ ಮೈಸೂರು ಪ್ರಭವನದ ಆವರಣದಲ್ಲಿ ಸ್ವತಂತ್ರ ಪಕ್ಷದ ಆಶ್ರಯದಲ್ಲಿ ಪ್ರಚಾರ ಸಭೆ ಏರ್ಪಡಿಸಿದೆ. ಒರಿಸ್ಸಾದ ಮಾಜಿ ಗವರ್ನರ್ ಆದ ಶ್ರೀ ಎ ಪಿ. ಮೆರ್ತ, ಡಾ| ಡಿ. ವಿ ಗುಂಡಪ್ಪ ರಾಜ್ಯ ಸ್ವತಂತ್ರ ಪಕ್ಷದ ಉಪಾಧ್ಯಕ್ಷ ಶ್ರೀ ಕೆ ಹೆಚ್ ಶ್ರೀನಿವಾಸರಾಂವರು ಭಾಷಣ ಮಾಡುವರು ಲೋಕಸಭೆ ಕ್ಷೇತ್ರಕ್ಕೆ ಉಮೇದುವಾರರಾಗಿರುವ ಶ್ರೀ ಎಚ್. ರಾಮರಾಜ ಅರಸ್‌ರವರು ಅಧ್ಯಕ್ಷತೆ ವಹಿಸುವರು

ಚಿನ್ನ ವಶ

ಭಾರತೀಯನೋರ್ವನು ಬಾಂಕಾಂಕಿನಿಂದ ಕಲ್ಕತ್ತಾದ ಡಂ ಡಂ ವಿಮಾನದಲ್ಲಿ ಬಂದು ಇಳಿದನು. ಸುಮಾರು 2 ಲಕ್ಷ ರೂ ಮೌಲ್ಯದ 14 ಸೇರುಗಳಷ್ಟು ಚಿನ್ನವನ್ನು ಅವನಿಂದ ವಶಪಡಿಸಿಕೊಂಡಿದೆ ಚಿನ್ನವನ್ನು ಅವನು ಜಾಕೆಟ್ ನಲ್ಲಿ ಮುಚ್ಚಿಟ್ಟಿದ್ದನು.

ಶ್ರೀ ಶ್ರೀಯವರ ವಾಣಿ

ದೆಹಲಿಯ ದೆಹಲಿ ಗೇಟ್‌ನಲ್ಲಿ ಮಹಾಯಾಗ ನಡೆಸಿದ ಶ್ರೀ ಬಂಡಾರಕೇರಿ ಮಠದ ಜಗದ್ಗುರುಗಳವರು ಪತ್ರಿಕೆಯವರಿಗೆ ಹೇಳಿಕೆಯಿತ್ತು, ಅಸ್ಪೃಶ್ಯತೆ ದೋಷದ ಫಲ ಎರಡೂವರೆ ವರ್ಷಗಳ ಕಾಲ ಇರುವುದೆಂದು ತಿಳಿಸಿದರು,

ವಿವಿಧ ವಿಷಯಗಳು

ಗೋವಾದ ಬಗ್ಗೆ ಭಾರತದ ಕಾರ್ಯಾಚರಣೆಯನ್ನು ಕುರಿತು ಅಂತರ್ರಾಷ್ಟ್ರೀಯ ನ್ಯಾಯವಾದಿಗಳ ಸಮಿತಿ ಪರಿಶೀಲಿಸುವದೆಂದು, ಅಂತರ್ರಾಷ್ಟ್ರೀಯ ನ್ಯಾಯವಾದಿ ಸಮಿತಿಯ ಪ್ರಧಾನ ಕಾರ್ಯದರ್ಶಿಯರ್ ಲೆಸ್ಲಿ ಮೆನ್ನೊ ಕಲ್ಕತ್ತಾದಲ್ಲಿ ತಿಳಿಸಿದ್ದಾರೆ.

೦೦

ಸೆಪ್ಟೆಂಬರು 18 ರಿಂದ ಮುಷ್ಕರಿಸುತ್ತಿರುವ ಹೈದರಾಬಾದಿನ ಸರ್ಕಾರಿ ಅಡುಗೆ ಶಾಲೆಯ ಕಾಲೇಜಿನ ವಿದ್ಯಾರ್ಥಿಗಳು ಕೂಳು ತಿನ್ನುವ ಮುಷ್ಕರ ಆರಂಭಿಸಿದ್ದಾರೆ ಇವರ ಅನೇಕ ಬೇಡಿಕೆಗಳಲ್ಲಿ, ಅಧ್ಯಾಪಕರಿಗೆ ಔಷಧಿ ಕೊಡುವದು ಇದೆ

೦೦

ಲಂಚ, ನಿರುದ್ಯೋಗವನ್ನು ನಿವಾರಣೆ ಮಾಡುವದರಲ್ಲಿ ಕಾಂಗ್ರೆಸು ವಿಫಲವಾಗಿದೆ ಎಂದು ಪ್ರಜಾ ಸೋಷಲಿಸ್ಟ್ ಪಕ್ಷಕ್ಕೆ ಅಧ್ಯಕ್ಷ ಶ್ರೀ ಅಶೋಕ ಮೆಹತ ಅಲಹಾಬಾದಿನಲ್ಲಿ ತಿಳಿಸಿದರು.

೦೦

ಅಸಹಕಾರ ಚಳುವಳಿಯಲ್ಲಿ 14 ಪಶ್ಚಿಮ ಬಂಗಾಳ ಆಂಧ್ರ ಪ್ರದೇಶದ ಗಾಯಾಧಿಕಾರಿಗಳು ಭಾಗವಹಿಸಿದರೆಂದು ಹೈದರಾಬಾದು ವಾರ್ತೆ ತಿಳಿಸುತ್ತದೆ

೦೦

ದಕ್ಷಿಣ ಆಫ್ರಿಕದಲ್ಲಿನ ಕಲಂಗಾಡೂ ವಿನಲ್ಲಿ ಸರ್ಕಸ್ಸಿನ ಆನೆಯೊಂದು ಪತ್ರಿಕೆಯವನೋರ್ವನನ್ನು ತುಳಿದುಕೊಂದಿತು ಅವನು ಆನೆಯನ್ನು ಶಟ್ಟುತ್ತಿದ್ದನು

೦೦

ಉತ್ತರ ಪ್ರದೇಶದ ಪ್ರಧಾನ ಕೈಗಾರಿಕೆ ಸಕ್ಕರೆ ಕೈಗಾರಿಕೆಗೆ ಬಿಕ್ಕಟ್ಟಾಗಿದೆ

ನಾಳೆಯ ಪಂಚಾಂಗ

ಅಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪಶ್ಯಕೃಷ್ಣ ಜೋಯಿಸರಿಂದ

ಶ್ರೀ ಜಾತಿ ಉತ್ತರಾಭಾದ್ರ

ಅಡಿಗೆ ಮಾಡುವುದು ಬರದೆ ಮದುವೆಯಿಲ್ಲ !

ಫೋಕ್ಸ್ಟನ್— 19 ವರ್ಷದ ಬಾರ್ಬರ ಎಂಬ ಯುವತಿ 19 ವರ್ಷದ ತನ್ನ ಗೆಳತಿ ಗೋಲ್ಕ್ಸ್ ಸಾಕಷ್ಟನ್ನು ವಿದ್ಯಾರ್ಥಿಗಳು ಅವಳಿಗೆ ಅಡಿಗೆ ಮಾಡುವುದು ಬಂದಿರದೇಕೆಂದು ಮ್ಯಾಜಿಸ್ಟ್ರೇಟರು ಅಚ್ಚರಿ ವ್ಯಕ್ತಪಡಿಸಿದರು — ಮುತ್ತು ಮೂರು ತಿಂಗಳು ಅವಧಿಯಲ್ಲಿ ಅವಳು ಅಡಿಗೆ ಮಾಡುವುದನ್ನು ಕಲಿತುಕೊಂಡು ಬಂದರೆ ಮದುವೆ ಯಾಗಲು ಅನುಮತಿಕೊಡುವುದಾಗಿ ಮ್ಯಾಜಿಸ್ಟ್ರೇಟರು ತಿಳಿಸಿದರು.

ಪುರಾಣದೇವಿಯ ದುರಂತ ವಿಷಯ

ಪಾಟಿಯಾಲದ ಪೋಸ್ಟ್ ಆಫೀಸಿನಲ್ಲಿ ಪುರಾಣದೇವಿಯು ತಿಂಗಳೆಯ ಮುಮಾರು ನೂರಿರಿ ರೂಪಾಯಿ ಇದ್ದವು ; ಅವನು 10 ವರ್ಷಗಳ ಹಿಂದೆ ಕಾಲವಾದ ಬಳಿಕ ಈಕೆಯ ಆ ಹಣಕ್ಕೆ ಹಕ್ಕು ನೀಡಿದಳು ; ಈ ಹಕ್ಕು ನಿಧಾನವಾಗಿ ಪಾಟಿಯಾಲ, ಅಂಬಾಲಾ, ಬಿಕಾನೀರು ಮತ್ತು ದೆಹಲಿಯಲ್ಲಿ ಮುತ್ತುತ್ತಿತ್ತು : ಆ ಎಲ್ಲ ಕಡಗಳಲ್ಲಿಯೂ ಯತೇಚ್ಛವಾಗಿ ಕಾಲ ಕಳೆಯಿತು : ಅವಳ ರಾಜುವಿಗೆ ಸಾಕ್ಷಿಯಾಗಿ ಗೆಜೆಟೆಡ್ ಅಫೀಸರರು ರಾಜುಗಾಗಿ ಅವಳಲ್ಲಿಗೆ ಅವಳ ಅರ್ಜಿ ಬಂದಿದ್ದಿತು : ಕಡೆಗೆ ಪುರಾಣದೇವಿಯು, ತನಗೆ ಈ ಹಣವು ಸ್ಮಶಾನದಲ್ಲಿ ಸಿಕ್ಕುತ್ತದೆಯೇ ಎಂದು ದೆಹಲಿ ಪೋಸ್ಟ್‌ಮಾಸ್ಟರು ಜನರಲ್ಲರಿಗೆ ಬರೆದಳು ; ಅವಳು ತೀರ ಖಾಯಿಲೆಯಾಗಿದ್ದು ಹಣದ ಅವಶ್ಯಕತೆ ಹೆಚ್ಚಾಗಿತ್ತು : ಹಣ ದೊರೆಯಲಿಲ್ಲ: ಸತ್ತು ಹೋದಳು : ಸತ್ತ 20 ದಿನಗಳನಂತರ ಮತ್ತೆ ರಾಜುವಿಗಾಗಿ ಕಾಗದ ಬಂತು : ವರ್ತು 6 ತಿಂಗಳ ನಂತರ,— ಬಂದು ಹಣವನ್ನು ತೆಗೆದುಕೊಂಡು ಹೋಗುವಂತೆ ಪೋಸ್ಟಾಫೀಸಿನವರು ಪುರಾಣದೇವಿಗೆ ಬರೆದರು !

ಲಂಚ ಸ್ವೀಕರಿಸಿದ ಅಧಿಕಾರಿಗಳಿಗೆ ಶಿಕ್ಷೆ

ನವದೆಹಲಿ ವಾರ್ತೆಯಂತೆ, ಡಿಸೆಂಬರು ತಿಂಗಳಲ್ಲಿ ಒಟ್ಟು 138 ಸರ್ಕಾರಿ ನೌಕರರು ಲಂಚ ರುಶುವತ್ತು ಇತ್ಯಾದಿ ದುರ್ವ್ಯವಹಾರಗಳ ಅಪರಾಧಗಳಿಗೆ ಗುರಿಯಾಗಿದ್ದಾರೆ — ಲಂಚ ತೆಗೆದುಕೊಳ್ಳುತ್ತಿದ್ದ ಸಮಯದಲ್ಲೇ ಮೂವರು ಸರಕಾರಿ ನೌಕರರು ಸಿಕ್ಕಿಬಿದ್ದರು — ಡಿಸೆಂಬರು ತಿಂಗಳಲ್ಲಿ ಒಟ್ಟು 24 ಜನ ಸರಕಾರಿ ನೌಕರರೂ 33 ಜನ ಖಾಸಗಿ ವ್ಯಕ್ತಿಗಳೂ ಮೂರು ವರ್ಷದವರೆಗಿನ ಕಾರಾಗೃಹವಾಸ ಮತ್ತು ಒಟ್ಟು 71032 ರೂಗಳ ಜುಲ್ಮಾನೆಗೆ ಗುರಿಯಾದರು.

Help ' The Gorakshana '

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

" ಗೋರಕ್ಷಣ " ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಮೈಸೂರುನಗರ (ದಕ್ಷಿಣ) ಕ್ಷೇತ್ರದಿಂದ ವಿಧಾನಸಭೆ ಚುನಾವಣೆ

— 25-2-62 —

ನಿಮ್ಮ ಪವಿತ್ರವಾದ ಓಟನ್ನು ಸ್ವತಂತ್ರ ಪಕ್ಷದ

ಡಾ|| ಎನ್. ಎಸ್. ನಾರಾಯಣರಾವ್

ಅವರಿಗೆ ಕೊಡಬೇಕಾಗಿ ವಿನಂತಿ — ಅವರ ಸೀರಿಯಲ್ ನಂ 3

ಅವರ ಗುರುತು ನಕ್ಷತ್ರದ ಮುಂದೆ

ನ ಕ್ಷ ತ್ರ X ಹೀಗೆ ಸೀಲ್ ಹಾಕಿ

ವುಡ್‌ಲ್ಯಾಂಡ್ಸ್ ಜನಭೂತ 2 ನೇ ವಾರ

ಷ ಮಾ (ಹಿಂದಿ) SHAMA

ಪಾತ್ರ-ಸುರಯ್ಯ, ನಿಮ್ಮಿ, ವಿಜಯಲತ ; ಸಂಗೀತ : ಗುಲಾಂ ಮಹಮದ್

ಅಮೋಘ ಹಿಂದಿ ಕಲಾಕೃತಿ [ದಿನವಹಿ 3 ಪ್ರದರ್ಶನಗಳು]

ಆಪೆರಾ ಚಿತ್ರ 2—2—62 ರಿಂದ

ಭೂ ಕೈ ಲಾ ಸ (ಕನ್ನಡ)

ತಾರಾಗಣ— ರಾಜಕುಮಾರ್, ಜಮುನ, ಇ ವಿ ಸರೋಜ, ರಂಗರಾವ್

ಕಮಲಾ ಲಕ್ಷ್ಮಣ್, ಗೋಪಿ ಕೃಷ್ಣ, [ದಿನವಹಿ 3 ಆಟಗಳು]



Pennant carried in the interplanetary station launched into Planet Venus' orbit

SHAKTI SUDHA

★

A Superb Tonic

Edited, Printed & Published by the Proprietor, Dharma Prachara Nirata M. S. Krishna Rao, at the Satyavadi Press Chamarajapuram, Mysore 4.